ಮಿಸ್ ನಂ. 05/2017 ಪಿ.ಡಬ್ಲ್ಯೂ 2

ಸಾಕ್ಷಿಯ ಹೆಸರುಃ ಅಪ್ಪಾಜಿಗೌಡ

ದಿನಾಂಕ 04-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಆರ್ ಆರ್ ವಕೀಲರಿಂದ,

ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಮಧ್ಯಂತರ ಅರ್ಜಿ ನಂ. 1 ನ್ನು ಪುರಸ್ಕರಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಜಿಪಿ ವಕೀಲರಿಂದ

1) ನಾನು ಮತ್ತು ಸ್ವಾಮಿಗೌಡರು ಸ್ನೇಹಿತರು ಎಂದರೆ ಸಾಕ್ಷಿ ಒಂದೇ ಊರಿನವರು ಎನ್ನುತ್ತಾರೆ. ಕರೀಗೌಡರು ಏನು ಕೇಸು ಹಾಕಿದ್ದರು ಎಂದು ಹಾಗೂ ಆ ಕೇಸಿಗೆ ಸಂಬಂಧಪಟ್ಟ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತು.. ಸ್ವಾಮಿಗೌಡರು ಏನು ಪರಿಹಾರ ಕೋರಿ ಈ ಕೇಸನ್ನು ಹಾಕಿರುತ್ತಾರೆ ಎಂದು ಗೊತ್ತು. ಅವರು ಅಪೀಲು ಹಾಕಿರುತ್ತಾರೆ. ಕರೀಗೌಡರು ಆರು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರು ಕ್ಯಾನ್ಸರ್ ರೋಗದಿಂದ ತೀರಿಕೊಂಡಿರುತ್ತಾರೆ. ಕರೀಗೌಡರಿಗೆ ಎರಡು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಕರೀಗೌಡರು ತೀರಿಕೊಂಡ ನಂತರ ಸ್ವಾಮಿಗೌಡರು ಅವರ ಕುಟುಂಬವನ್ನು ನೋಡಿಕೊಳ್ಳುತ್ತಿದ್ದಾರೆ. ನಾನು ಸ್ವಾಮಿಗೌಡರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.